Available online at www.elixirpublishers.com (Elixir International Journal)

Literature

Elixir Literature 107 (2017) 47412-47416

ISSN: 2229-712X

# Portrait of Basavanna in Harihara's Ragale
# ಹರಿಹರನ ರಗಳೆಯಲ್ಲಿ ಬಸವಣ್ಣನ ಚಿತ್ರಣ

Bullannavar Basusab, ಬುಳ್ಳಣ್ಣವರ ಬಾಸೂಸಾಬ

ಸರಕಾರಿ ಪ್ರಥಮ ದರ್ಜೆ ಕಾಲೇಜು ಗದಗ, ಕರ್ನಾಟಕ Govt First Grade College Gadag, Karnataka

ARTICLE INFO

Article history:
Received:13 April 2017;
Received in revised form:
20 May 2017;
Accepted: 12 June 2017;

Keywords
Harihara – ಹರಿಹರ
Ragale – ರಗಳೆ
Sight – ದೃಷ್ಟಿ
Creation – ಸೃಷ್ಟಿ
Basavanna - ಬಸವಣ್ಣ

ABSTRACT

Harihara is a poet's unique and immense contribution to Kannada literature. He is a representative of the age by depicting all aspects of contemporary life in his works. From Vipra to Anthijana, from the laborer to the king, from the girl to the widow, everyone takes the place of heroes in his works. Basavanna's devotional spirit and Harihara's devotional ecstasy can be felt mutually. This concept of devotion is the embodiment of Basavanna's personality for Harihara. The most attractive and impressive aspect is that Harihara, who paints Basavanna down to the core, reveals the layers of his devotion as if full of poetry.

ಹರಿಹರ ಕನ್ನಡ ಸಾಹಿತ್ಯಕ್ಕೆ ಕವಿಯ ಅನನ್ಯ ಮತ್ತು ಅಪಾರ ಕೊಡುಗೆ. ಸಮಕಾಲೀನ ಜೀವನದ ಎಲ್ಲ ಅಂಶಗಳನ್ನು ತಮ್ಮ ಕೃತಿಗಳಲ್ಲಿ ಚಿತ್ರಿಸುವ ಮೂಲಕ ಅವರು ಯುಗದ ಪ್ರತಿನಿಧಿಯಾಗಿದ್ದಾರೆ. ವಿಪ್ರನಿಂದ ಅಂತ್ಯಜನರವರೆಗೆ, ಕಾರ್ಮಿಕನಿಂದ ರಾಜನವರೆಗೆ, ಹುಡುಗಿಯಿಂದ ವಿಧವೆಯವರೆಗೆ ಎಲ್ಲರೂ ಅವರ ಕೃತಿಗಳಲ್ಲಿ ವೀರರ ಸ್ಥಾನವನ್ನು ಪಡೆದುಕೊಳ್ಳುತ್ತಾರೆ. ಬಸವಣ್ಣನವರ ಭಕ್ತಿ ಭಾವ ಮತ್ತು ಹರಿಹರನ ಭಕ್ತಿಯ ಭಾವಪರವಶತೆಯನ್ನು ಪರಸ್ಪರ ಅನುಭವಿಸಬಹುದು. ಈ ಭಕ್ತಿಯ ಪರಿಕಲ್ಪನೆಯೇ ಹರಿಹರನಿಗೆ ಬಸವಣ್ಣನವರ ವ್ಯಕ್ತಿತ್ವದ ಸಾಕಾರವಾಗಿದೆ. ಅತ್ಯಂತ ಆಕರ್ಷಕ ಮತ್ತು ಪ್ರಭಾವಶಾಲಿ ಅಂಶವೆಂದರೆ ಬಸವಣ್ಣನವರನ್ನು ಚಿತ್ರಿಸುವ ಹರಿಹರನು ತನ್ನ ಭಕ್ತಿಯ ಪದರಗಳನ್ನು ಕಾವ್ಯದಿಂದ ತುಂಬಿರುವಂತೆ ಬಹಿರಂಗಪಡಿಸುತ್ತಾನೆ.

© 2017 Elixir All rights reserved.

## 1. ಪೀಠಿಕೆ:

ಹರಿಹರನು ಬಸವರಾಜ ದೇವರ ರಗಳೆಯಲ್ಲಿ ಬಸವಣ್ಣನ ದಿವ್ಯ ವ್ಯಕ್ತಿತ್ವದ ಮೇಲೆ ತುಂಬಾ ಒತ್ತು ಕೊಟ್ಟಿದ್ದಾನೆ. ಸಾಂಪ್ರದಾಯಿಕ ವರ್ಣನೆ, ಅಲಂಕಾರ ಮೊದಲಾದವುಗಳಿಗಾಗಿ ಕವಿಯು ಆಸ್ಪದ ಕೊಡುವುದಿಲ್ಲ. ಇಂಥ ಅಂಶಗಳು ಅಲ್ಲಲ್ಲಿ ಬಳಕೆಗೊಂಡಿದ್ದರೂ ಮುಖ್ಯತ: ಬಸವಣ್ಣನ ಭಕ್ತಿ, ಲೋಕಕಲ್ಯಾಣ ದೃಷ್ಟಿ, ಸರ್ವ ಸಮರ್ಪಣಭಾವ, ಸದಾಚಾರ ಸದ್ವಿನಯ ಮೊದಲ ಉನ್ನತ ಗುಣಗಳ ಮಹಿಮೆಯನ್ನು ಕವಿ ಪ್ರತಿಪಾದಿಸುತ್ತಾನೆ. ಯಾವುದೇ ಪ್ರಸಂಗವಿರಲು ಹರಿಹರನ ದೃಷ್ಟಿ ಬಸವಣ್ಣನ ಅಂತರಂಗದಲ್ಲಿ ವಿಕಸಿತಗೊಳ್ಳುತ್ತ ತನ್ನ ಅನುಭಾವ ಪಡೆಯುವ ಅನುಭಾವ ಭಕ್ತಿಯ ಮೇಲೆಯೇ ಹರಿಹರನು ಮಹಾಕವಿಯಾಗಿದ್ದಂತೆ ಮಹಾ ಭಕ್ತನಾಗಿದ್ದುದು ಇದೇ ಕಾರಣ.

## 2. ವಿಷಯ:

ಹರಿಹರನ "ಪುಷ್ಪರಗಳೆ" ಈ ಮಾತಿಗೆ ಸಾಕ್ಷಿ. ಪೂಜೆಗೆ ಬೇಕಾದ ಹೂ ಎತ್ತಲು ಹೊರಟ ಹರಿಹರನಿಗೆ ಹೂದೋಟ ಕಂಡೊಡನೆ ಮೈಮುಟ್ಟುತ್ತದೆ. ಗಾಳಿ ಅಲಗುವುದಕ್ಕಿಂತ ಮೊದಲು ಅಳಿಗಳು ಎರಗುವುದಕ್ಕೆ ಮುಂಚೆ ನೇಸರನ ಕಿರಣಗಳು ಮುಟ್ಟುವ ಪೂರ್ವವೇ ಹೂಗಳನ್ನು ಆಯ್ದು ಎತ್ತಿಕೊಂಡು ಶಿವನಿಗೆ ಅರ್ಪಿಸುವ ಮೀಸಲು ಭಕ್ತಭಾವ ಅವನದು. ಪತ್ರಾಳಿಗಳಿಗೆ ಶರಣು; ದೊಟ್ಟಿ ಪತ್ರೆಗೆ ನಮೋ ಎನ್ನುತ್ತಾನೆ. ಇರುವಂತಿ ಸಂಪಿಗೆ ಸೇವಂತಿಗೆಗಳನ್ನು ಪೂವನಿಕಾ ಏನವ್ವ–ಪೊಸ ಕುಸುಮಮಂ ನೀಡು ಬಾರವ್ವ ಎಂದು ಮುಂತಾಗಿ ವಿನಯಶೀಲನಾಗಿ ಗೌರವದಿಂದ ಮಾತಾಡಿಸಿ ಕೇಳಿ ಹೂ ತುಂಬಿಕೊಳ್ಳುತ್ತಾನೆ. ಹರಿಹರನ ದೃಷ್ಟಿ ಚೆಲುವನ್ನು ಭಕ್ತಿಮುಖವಾಗಿಯೇ ಆವಿಷ್ಕಾರಗೊಳಿಸುವಲ್ಲಿ ಸಫಲವಾಗುವಂಥದು.

## 1. Introduction

Harihara has laid great emphasis on the divine personality of Basavanna in his hymn to Basavaraja Deva. The poet does not care for traditional description, decoration etc. Although such elements are used here and there, the main one is: the poet asserts the glory of Basavanna's devotion, world welfare vision, all dedication, righteousness and soundness. This is the reason why Harihara became a great devotee just as he became a great poet on the basis of the feeling of devotion that Harihara's vision develops during the time of Basavanna.

## 2. Content

Harihara's "Pushparagale" is a testimony to this statement. Harihara, who was about to pick flowers for the puja, was moved by the sight of the bouquet. Before the wind blows, before the squirrels fly, before the rays of Nesra touch, he picks flowers and offers them to Shiva. Surrender to the press; Dotti says Namo to Patre. Iruvanti sampi first asks the sevantis to be poovanika enavva-posa kusumaman needu baravva and speaks respectfully and fills the flower. Harihara's vision succeeds in inventing beauty in a devotional way.

Tele: 8861814506
E-mail addresses:bullannavarbasusab@gmail.com

© 2017 Elixir All rights reserved.

ಶಿವನ ಆರಾಧನೆಗಾಗಿಯೇ ಸೃಷ್ಟಿಗೊಂಡಿರುವ ಜೀವಂತ ನಿಸರ್ಗವೇ ಭಕ್ತಿಯ ಅಕ್ಷದ ಮೇಲೆಯೇ ಚಲಿಸುವ ಹರಿಹರನ ಪ್ರತಿಭೆ ಕ್ಷಣ ಕ್ಷಣಕ್ಕೂ ಭಕ್ತನ ಅಚ್ಚರಿ ಕೌತುಕ, ಆವೇಗ, ಆವೇಶ, ಉದ್ವೇಗ, ಉದ್ಗಾರ, ವಾತ್ಸಲ್ಯ, ಸ್ನೇಹಭಾವಗಳಿಂದ ಬಣ್ಣವೇರುತ್ತದೆ. ಅದಕ್ಕನುಗುಣವಾದ ಲಾಲಿತ್ಯ ಮಾಧುರ್ಯಗಳು ಆತನ ಪದ ಪುಂಜಗಳಲ್ಲಿ ಮೂರ್ತರೂಪ ತಾಳಿ ಕಣ್ಣೆದುರು ನರ್ತಿಸುತ್ತದೆ.

ಬಸವಣ್ಣನ ಜೀವನದ ಉನ್ನತ ಮೌಲ್ಯಗಳಾಚರಣೆ ಶೀಲಸಂಪಾದನೆ, ಭಕ್ತಿಯ ಮೂಲಕ ದಿವ್ಯಚೇತನದ ಒಲುಮೆ ಸಾಕ್ಷಾತ್ಕಾರಗಳು ಹರಿಹರನ ಕಾವ್ಯ ಸೃಷ್ಟಿಗೆ ಮಹಾಪೂರ ರಭಸವನ್ನೇ ಒದಗಿಸಿವೆ. ಆದುದರಿಂದ ಆತ ಈ ಕಾವ್ಯ ನಿರ್ಮಿತಿಯಲ್ಲಿ ತನ್ನ ಸೃಜನಶಕ್ತಿಯನ್ನು ಮೇಲೆ ಹೇಳಿದ ಆ ಉದ್ದೇಶ ಸಾಧನೆಗಾಗಿ ದುಡಿಸಿಕೊಳ್ಳುತ್ತಾನೆ. ಬಸವಣ್ಣನಿಗೆ ಯೌವನಾಲಿಂಗಿಸೆ, ಶರಣರ ಮೂರ್ತಿಯ ಕಣ್ಣಮಣಿಮೆನಿಪ, ಕಣ್ಣು ಶಿವಪೂಜಾ ಕುಸುಮಿತ ಲತೆಯಂತೊಪ್ಪುವಗಳಿತೋಳು, ಶರಣರ ಚರಣಾಲಿಂಗನಕ್ಕೆಡೆಗೊಟ್ಟು ಶೋಭಿಸುವ ಪೇರುರ ಪ್ರಸಾದಸಲುವೆನಿಸಿದ ಪುಣ್ಯೋದರ. ಹೀಗೆ ವ್ಯಕ್ತಿಯ ಬಾಹ್ಯರೂಪ ಚಿತ್ರನದಲ್ಲಿಯೇ ಭಕ್ತಿಯ ಭವ್ಯಾಂಕುರ ಕಾಣುತ್ತದೆ. ಹರಿಹರ, ಕಾವ್ಯಕ್ಕೆ ದೀಕ್ಷೆಕೊಟ್ಟ ಮಹಾಕವಿ ಬಸವಣ್ಣನ ಉನ್ನತ ಶೀಲ, ಉದಾತ್ತ ಚಿತ್ತ ಪ್ರವೃತ್ತಿ, ಅಂತರಂಗ ಶುದ್ಧಿಗಳನ್ನು ವಿವರಿಸುವಾಗಲಂತೂ ಹರಿಹರನ ಸೃಜನಶಕ್ತಿ ಮತ್ತು ಭಕ್ತಿ ಸೌಷ್ಠವಗಳು ಸಂಗಮಿಸಿ ವಿಜೃಂಭಿಸುತ್ತವೆ. ಪವಾಡದ ಪ್ರಸಂಗಗಳಲ್ಲಿ ಹುದುಗಿರುವ ಅನೇಕ ಆಶ್ಚರ್ಯಕರ ಮತ್ತು ಅದ್ಭುತ ಘಟನೆಗಳು, ಬಸವಣ್ಣನ ಭಕ್ತಿಯ ಸಿದ್ಧಿ ಅನುಭಾವದ ಮುಖಾಂತರ ಆತನಲ್ಲಿ ಅವಿಷ್ಕಾರಗೊಂಡ ದಿವ್ಯಶಕ್ತಿ ಸಂಚಯಕ್ಕೆ ಸಂಕೇತಗಳಾಗಿವೆ. ಜೊತೆಗೆ ಅರಿವಿನ ಸಾಮಾಜಿಕ ಕ್ರಾಂತಿಕಾರಕ ವಿಷಯಗಳ ಪ್ರತೀಕಗಳಾಗಿವೆ.

"ಬಸವಣ್ಣನ ಅಪೂರ್ವ ವ್ಯಕ್ತಿತ್ವವನ್ನು ವರ್ಣಿಸುವ ಎಂಟನೆಯ ಸ್ಥಲ ಈ ಕೃತಿಯ ಸೌಂದರ್ಯ ಶಿಖರವಾಗಿದೆ. ಬೇರೆ ಬೇರೆ ಭಾಗದಿಂದ ಬಂದು ಮಂಗಳವಾಡದಲ್ಲಿ ನೆಲೆಸಿ ಬಸವಣ್ಣನ ಭಕ್ತಿ ಪ್ರಭಾವಕ್ಕೆ ಒಳಗಾಗಿ ಆತನನ್ನು ಮೆಚ್ಚಿಸಿದ ಗಣಂಗಳು ಬಸವಣ್ಣನ ಘನ ವ್ಯಕ್ತಿತ್ವವನ್ನು ವಿಧವಿಧವಾಗಿ ಕೊಂಡಾಡುವ ಈ ಸನ್ನಿವೇಶವನ್ನು ಓದಿದಾಗ, ಹರಿಹರ ಬಸವಣ್ಣನನ್ನು ಎಷ್ಟು ಹತ್ತಿರದಿಂದ ಕಂಡಿರಬಹುದು ಎಷ್ಟೊಂದು ಮೆಚ್ಚಿಕೊಂಡಿರಬಹುದು ಎನ್ನುವುದರ ಕಲ್ಪನೆ ನಮಗಾಗುತ್ತದೆ. ಎದುರಿಗೆ ಬಸವಣ್ಣ ನಿಂತಿರಬಹುದು ಅಥವಾ ಬದಿಯಲ್ಲಿ ಕುಳಿತಿರಬಹುದು ಎಂದು ಭಾಸವಾಗುತ್ತದೆ. ತನಗೆ ಪ್ರೀಯನಾದ ಒಬ್ಬ ಉನ್ನತ ಮಹಿಮಾಶೀಲ ವ್ಯಕ್ತಿಯನ್ನು ಮೆಚ್ಚಿ ಆತನನ್ನು ಮನವಾರೆ ಬಣ್ಣಿಸಿದ ರೀತಿಯಲ್ಲಿ ಈ ಸನ್ನಿವೇಶದ ಪ್ರತಿಯೊಂದು ಮಾತೂ ನೇರವಾಗಿ ನಮ್ಮ ಅಂತ:ಕರಣವನ್ನು ಸ್ಪರ್ಶಿಸುತ್ತದೆ. ಕಾವ್ಯವಸ್ತು ಮತ್ತು ಕವಿಸಂವೇದನೆಗಳು ಒಂದಾಗಿ ಸಮರಸಗೊಂಡಾಗ ಕಾವ್ಯದ ಅಭಿವ್ಯಕ್ತಿಯಲ್ಲಿ ಎಂಥ ಅಮೋಘವಾದ ಶಿಲ್ಪಶಕ್ತಿ ಹೊರಹೊಮ್ಮಬಲ್ಲದು ಎನ್ನುವುದಕ್ಕೆ ಈ ಸನ್ನಿವೇಶ ಸಾಕ್ಷಿಯಾಗಿದೆ.1

ಬಸವಣ್ಣ ಕಾರಣಿಕ ಪುರುಷನಾದದ್ದು ಕೇವಲ ಪವಾಡಗಳಿಂದಲ್ಲ. ಆತನ ವ್ಯಕ್ತಿತ್ವದಲ್ಲಿ ಹುದುಗಿದ ಉನ್ನತವಾದ ಶಿವತೇಜ ಉನ್ನತವಾದ ಮಾನವೀಯ ಗುಣಗಳಿಂದ ಮತ್ತು ಮಾನವತ್ವದಲ್ಲಿರುವ ಗೌರವದಿಂದ ಎಂಬುದು ಎದ್ದು ಕಾಣುತ್ತದೆ.

ಈ ಮಾತು ಕೆಳಗಿನ ಪ್ರಸಂಗದಲ್ಲಿ "ಎಲೆ ಬಸವಾ, ಬಸವಣ್ಣಾ, ಬಸವಯ್ಯಾ, ಬಸವರಸಾ, ಬಸವರಾಜಾ, ಬಸವಿದೇವಾ, ಕೇಳಯ್ಯಾ" ಎಂದು ಶರಣರ ಮುಖಾಂತರ ಆತನ ನೇಮಗಳನ್ನು ಬಣ್ಣಿಸುತ್ತಾನೆ. ನಿಮ್ಮ ನೇಮವಿದಾರ್ಗುಂಟು? ಗುರುಲಿಂಗದೊಳೆರೆಲ್ಲದಿರ್ಪೆ; ಶರಣರಂ ಸಂಗಸಿಂದೆ ಕಾಣ್ಬೆ; ಬಂದ ಭಕ್ತರನತ್ಯಾದರಿಪೆ; ಬಪ್ಪ ಭಕ್ತರಂ ಹರ್ಷದೊಳಿದಿರ್ಗೊಂಟೆ ಬೇಡಿದ ಶರಣರ್ಗಿಲ್ಲೆನ್ನದೀವೆ, ಬೇಡಲೊಲ್ಲದವರ್ಗೆ ಮಿಗಿಲಾಗಿ ಆರಾಧಿಪೆ; ಜಾಗ್ರತ, ಸ್ವಪ್ನ, ಸುಷುಪ್ತಿಯ ವಸ್ಥತ್ರಯಂಗಳೊಳು ಶರಣರ ಸಂಗನೆಂದಲ್ಲದೆ ಕಾಣೆ; ನಿತ್ಯ ಶಿವರಾತ್ರಿಯನಚ್ಚರಿಯಂ ಮಾಳ್ಪೆ ಜಂಗಮ ಪ್ರಾಣಿಯಾಗಿರ್ಪೆ; ಶಿವಲಿಂಗಾರ್ಪತವಲ್ಲದುದನಾಘ್ರಾಣಿಸೆ ನೋಡೆ, ನುಡಿಯೆ, ಮುಟ್ಟೆ, ಕೇಳೆ ಶಿವಸಮಯವನ್ನುದ್ಧರಿಸುವೆ ಸರಸಮಯಮಂ ಗೆಲುವೆ; ಲಿಂಗದಲ್ಲಿ ಕಠಿಣಮಂ ಕೇಳೆ; ಜಂಗಮದಲ್ಲಿ ಜಾತಿಯನರಸೆ, ಪ್ರಸಾದದಲ್ಲಿ ಅಪವಿತ್ರತೆಯನರಿಯೆ; ಪರಾಂಗನೆಯರಂ ಹೆತ್ತ ತಾಯಿಗಳೆಂಬೆ, ಪರದ್ರವ್ಯಮಂ ಕಿಲ್ಬಿಷಮೆಂದು ಮುಟ್ಟೆ; ನಡೆದು ತಪ್ಪೆ, ನುಡಿದು ಹುಸೆಯೆ, ಹಿಡಿದು ಬಿಡೆ, ಬಿಟ್ಟು ಹಿಂಗಲೀಯೆ; ನಟ್ಟು ಕೀಳೆ, ಮುಟ್ಟಿ ಪರಪಂಗೆ ಕೂಡಿ ತಪ್ಪೆ; ನೋಡಿ ನಿರಾಕರಿಸೆ; ನೆನೆದು ಮರೆಯೆ ಮನದೊಳೋವರಿಯಿಲ್ಲ ಬುದ್ಧಿಯೊಳು ಸಂಚಯವಿಲ್ಲ ಅಹಂಕಾರದೊಳು ಗರ್ವವಿಲ್ಲ; ಚಿತ್ತದೊಳು ಹೊರೆಯಿಲ್ಲ, ಕಾಮವಿಲ್ಲ, ಕೋಪದ ಮಾತೇಕೆ? ಲೋಭದ ಗಾಳಿ ತೀಡದು, ಮೋಹಕ್ಕೆ ತೆರೆದಿಲ್ಲ. ಮದದ ಸೊಗಡುಹೊದ್ದದು; ಮತ್ಸರಕ್ಕಿಂಬಿಲ್ಲ, ಬಸವರಾಜಾ ನಿನ್ನ ಗುಣಂಗಳಂ ಬಣ್ಣಿಸಲೆಮ್ಮಳವಿಲ್ಲ, ಈಶನ ಮೀಸಲಪ್ಪ ಭಕ್ತ ನಿನಗೆಣೆಯಿಲ್ಲ, ಪತಿಯಿಲ್ಲ ಪಾಸಟಯಾವಂ? ಇದು ಹರಿಹರ ಕವಿ ಕಂಡರಿಸಿದ ಬಸವಣ್ಣನ ಅಖಂಡ ರತ್ನಕಲಾ ಶಿಲ್ಪ.

Harihara's genius, which moves on the axis of devotion to the living nature created for the worship of Shiva, is moment by moment colored by the devotee's wonder, passion, excitement, excitement, affection and friendship. Correspondingly elegant melodies are embodied in his word punjas and dance before the eyes.

Basavanna's celebration of the high values of life, spiritual realization through devotion and devotion provided a great impetus to Harihara's poetic creation. Therefore, he works his creativity in this poetic creation to achieve the above mentioned objective. For Basavanna, the youth lingise, the eyes of Sharana's idol, the eyes of Shiv Pooja, the arms of Kusumita vines, the Sharana's charana lingam, which adorns Peru's offering. Thus, the essence of devotion can be seen in the appearance of a person. Harihara, the epic poet Basavanna, who initiated poetry, has a high spirit, a noble mind, and while describing the AntarAga Shuddhis, Harihara's creativity and devotional qualities meet and flourish. Many surprising and wonderful events embedded in the miraculous episodes are symbols of the accumulation of divine power discovered in Basavanna through the siddhi experience of Bhakti. In addition, they are symbols of revolutionary social issues of awareness.

"The eighth stanza describing Basavanna's wonderful personality is the beauty peak of this work. When we read this situation where Ganams, who came from different parts and settled in Mangalvada and were influenced by Basavanna's devotion, praised Basavanna's solid personality in various ways, we get an idea of how closely Harihara must have seen Basavanna and how much he admired Basavanna. Feels like sitting. Every word of this situation directly touches our hearts as he admires a high and glorious person who is dear to him. This situation is a testimony to what great sculptural power can emerge in the expression of poetry when poetic material and poetic sensibilities are reconciled.1

Basavanna became a causal man not only because of miracles. The exalted Shivteja embodied in his personality stands out for his high human qualities and respect for humanity.

In the episode following this speech, he describes his names through Sharana as "Ele Basava, Basavanna, Basavaiya, Basavarasa, Basavaraja, Basavideva, Kelaya". What is your employer? Gurulingadorelladirpe; Sharanaram Sangasi Ade Kanbe; Thanks to the devotees who came; Bappa Bhaktaram harshadolidirgonte bedida sharnargillennadeve, bedolalladavar migilga aradhipe; Vigilance, sleep, sleeplessness are nothing but surrenders; Nitya Shivaratriyanacharyam malpe jangama prayanagirpe; See, speak, touch, listen to Shivlingarpatalladudanaghranise Shiva samayanadharisuwe Sarasamayaman victory; Karasaman is heard in Linga; Caste love in Jangam, defilement in Prasada; Paranganera A Hetta Taigalembe, Paradravyaman Kilkhishamendu mutte;

Walk and fall, play and pretend, hold and leave, leave and hang; The plant is sown, touched and gathered to the ground; See and deny; Remembering and hiding, there is no mind, no intelligence, no accumulation, no ego, no pride; Chittadolhu is not burdened, no lust, why talk of anger? The wind of greed is not strong, it is not open to infatuation. Madada Sogahodda; Matsarakkimbililla, Basavaraja, your Gunangala A is not painted, Ishana Meesalappa devotee, you have no husband, Pasatayavam? This is an intact gem sculpture of Basavanna by Harihara Kavi.

ಸಾಹಿತ್ಯ ಪ್ರಪಂಚಲ್ಲಿ ಈ ಮಾದರಿಯ ವ್ಯಕ್ತಿ ಚಿತ್ರಣ ವಿರಳ. ಬಸವಣ್ಣನವರ ವ್ಯಕ್ತಿತ್ವ ಉನ್ನತ ಅವರ ಅಂತರಂಗದ ಪದರು ಪದರಗಳನ್ನು ಅತ್ಯಂತ ಸೂಕ್ಷ್ಮವಾಗಿ ನವುರಾಗಿ ಚಿತ್ರಿಸಿದ ಬಸರಾಜರ ದೇವರ ರಗಳೆಯ ಈ ಭಾಗ ಹರಿಹರನ ಕಾವ್ಯ ಪ್ರಜ್ಞೆಯ ಭವ್ಯತೆಯ ಕುರುಹಾಗಿದೆ. ಭಕ್ತಿಯನ್ನು ದಿವ್ಯ ಚೈತನ್ಯದ ಅನುಭಾವವನ್ನು ತನ್ನ ಕಾವ್ಯದ ಮೂಲ ದ್ರವ್ಯವಾಗಿ ಬಳಸಿದ ಹರಿಹರ ಮಹಾಕವಿಯ ಪ್ರತಿಭೆ, ಶರಣರ ಉನ್ನತ ಜೀವನದ ವರ್ಣನೆಗೆ ಮಾರುಹೋದದ್ದು, ಸೂರೆಗೊಂಡದ್ದು ಅದು ಈ ಅಂತರಾಳದಲ್ಲಿ ಬೇರಿಳಿದು ರಮ್ಯವಾದ ಶುದ್ಧ ಪರಿಸರ ನಿರ್ಮಾಣದಲ್ಲಿ ಚಿಗುರಿಟ್ಟು ರಸೋಜ್ವಲ ಚಿತ್ರ ಪಾತ್ರಗಳನ್ನು ವಿರಚಿಸಿ ಸಹೃದಯ ಭಾವ ಕೋಶಗಳಲ್ಲಿ ಸೌಂದರ್ಯ ಮೂಲಕವಾದ ಶಿವಾನುಭೂತಿ, ಶಿವದರ್ಶನಗಳನ್ನು ಸುಸಂಗತಗೊಳಿಸುವ ಪ್ರತಿಭಾನ್ವಿತ ಹರಿಹರನನ್ನು ಬರಿಯ ಮಹಾಕವಿ ಎನ್ನಬಹುದೇ? ಏನನ್ನು ತನಗಾಗಿ ಆಪೇಕ್ಷಿಸದೆ ತನ್ನ ಎಲ್ಲವನ್ನು ಶರಣರ ನಿಲುವಿಗಾಗಿ ವಿಶ್ವಕಲ್ಯಾಣಕ್ಕಾಗಿ ಬಳಸಿ ಬಸವಣ್ಣನ ಮಹಾಜೀವನವನ್ನು ಉಜ್ವಲವಾಗಿ ಚಿತ್ರಿಸಿದ್ದಾನೆ.

ಹರಿಹರ; ಕವಿ ಸಾರ್ಥಕಗೊಳಿಸಿಕೊಂಡಿದ್ದಾನೆ ತನ್ನ ಜೀವನವನ್ನು ಪರವಾದಿಗಳೊಡನೆ ವಾದ ಮಾಡಿದ ಚಿತ್ರ ಶರಣಗಣದೊಡನೆ ಶಿವಾನುಭವ ನಡೆಸಿದ ಚಿತ್ರ ಕೂಡಲ ಸಂಗಮೇಶ್ವ'ರನ ಆರಾಧನೆ ಸ್ವಪ್ನದಲ್ಲಿ ಸಂಗಮೇಶನ ದರ್ಶನ ಮುಂತಾದ ಪ್ರಸಂಗಗಳ ಉಚಿತ ಭಾಷೆ, ಹಿತಮಿತ ಸುಂದರ ಶೈಲಿಗಳು ಕಾವ್ಯಕ್ಕೆ ಮೆರುಗು ತಂದಿವೆ.

ಈ ಕವಿಯು ತನ್ನ ಕೃತಿಗಳಲ್ಲಿ "ಹರಿಹರತ್ವ" ಪ್ರಕಟಪಡಿಸಿದ್ದಾನೆ. ಭಕ್ತಿಯ ಉತ್ಸಾಹ ಭಾಷೆಯ ಮೇಲಿನ ಪ್ರಭುತ್ವ ಶಿವಶರಣರ ಮೇಲಿನ ಹೆಮ್ಮೆ ಅಭಿಮಾನ, ಶರಣರು, ಭಾವ, ಜನನ ಮರಣಗಳನ್ನು ಬದಿಗೆ ಸರಿಸಿ ಲೌಕಿಕವನ್ನು ಮೀರಿ ಅಲೌಕಿಕವನ್ನು ಪ್ರದರ್ಶಿಸಿ ಎಲ್ಲವನ್ನು ಭಕ್ತಿಗೆ ಪರ್ಯವಸಾನ ಮಾಡಿಕೊಳ್ಳುವ ಕೌಶಲ ಕರ್ಮಗಳನ್ನೇ ಭಕ್ತಿ ಯೋಗವನ್ನಾಗಿ ಮಾಡಿಕೊಳ್ಳುವುದು ಶಿವ-ಶಿವಭಕ್ತರಲ್ಲಿ ದೋಷವನ್ನು ಕಾಣದಿರುವುದು ಈ ಮೊದಲಾದವು ಈ ಕವಿಯ ಕೆಲವು ವಿಶೇಷ ಕುರುಹುಗಳು, ಗುಣ ಲಕ್ಷಣಗಳು ಶಿವಭಕ್ತಿಯ ಪ್ರಸಾರಕ್ಕೆ ಪರ ಧರ್ಮಿಯರೊಡನೆ ಹೋರಾಡುವುದು ಸತ್ಯ ನ್ಯಾಯಗಳಿಗೆ ಹೋರಾಡುವುದು ಪರಂಪರೆಯ ಭಕ್ತಿಗೆ ಅಡ್ಡವಾದರೆ ಪ್ರತಿಭಟಿಸುವುದು ಇವೆಲ್ಲ ಅವನ ಭಕ್ತರ ವೈಶಿಷ್ಟ್ಯಗಳು. ಶಿವನ ಶರಣರ ಭಕ್ತರ ಸೇವೆಯೇ ಈಶ್ವರ ಸಾಕ್ಷಾತ್ಕಾರಕ್ಕೆ ಮಾರ್ಗವೆಂದಿರುದು, ಹಂಪೆ ತುಂಗಭದ್ರೆಯರನ್ನು ಅವಕಾಶ ಬಂದಾಗಲೆಲ್ಲ ಬಣ್ಣಿಸುವುದು ವಂಚನೆ, ಮೋಸ, ಕಪಟ, ಸ್ವಾರ್ಥಗಳನ್ನು ಖಂಡಿಸುವುದು ಅವನ ಶರಣರ ಗುಣ ಅವನ ಕಾಲದ ಶರಣರು ಹೇಗೆ ಶಿವಭಕ್ತ, ಶಿವಧರ್ಮಗಳ ಬಗ್ಗೆ ಹೋರಾಡುವರೆಂಬುದನ್ನು ತಿಳಿಸುವುದಕ್ಕೋಸ್ಕರ ಅವನು ತನ್ನ ಕೃತಿಗಳಲ್ಲಿ ಶರಣರ ವ್ಯಕ್ತಿತ್ವದ ತೀಕ್ಷ್ಣ ಮನೊಭಾವ ಅನ್ಯಾಯಗಳ ವಿರುದ್ಧದ ಪ್ರತಿಭಟನೆ, ಅನೀತಿಯೊಡನೆ ಎಂದೂ ಒಪ್ಪಂದ ಮಾಡಿಕೊಳ್ಳದ ಸತ್ಯ ಸಂಧತೆಗಳಿಗೆ ಆದ್ಯತೆ ಕೊಡುತ್ತಾನೆ.

ಕನ್ನಡ ಸಾಹಿತ್ಯಕ್ಕೆ ಹರಿಹರ ಕವಿಯ ಅಪೂರ್ವ ಹಾಗೂ ಅಪಾರ ಕೊಡುಗೆ, ಸಮಕಾಲೀನ ಜೀವನದ ಸರ್ವ ಮುಖಗಳನ್ನು ತನ್ನ ಕೃತಿಗಳಲ್ಲಿ ಚಿತ್ರಿಸಿ ಯುಗದ ಪ್ರತಿನಿಧಿಯಾಗಿದ್ದಾನೆ. ವಿಪ್ರನಿಂದ ಅಂತ್ಯಜನವರೆಗೆ ಕೂಲಿಕಾರನಿಂದ ಅರಸನವರೆಗೆ ಬಾಲಕಿಯಿಂದ ವಿಧವೆಯವರೆಗೆ ಎಲ್ಲರೂ ಅವನ ಕೃತಿಗಳಲ್ಲಿ ನಾಯಕರ ಸ್ಥಾನ ಪಡೆಯುತ್ತಾರೆ. ಇತರರಲ್ಲಿ ನಿರ್ಲಕ್ಷಕ್ಕೆ ಒಳಗಾಗಿ ಅಪ್ರಮುಖರೆಂದು ತೋರುತ್ತಿದ್ದ ವ್ಯಕ್ತಿಗಳು ಇಲ್ಲಿ ಮುಖ್ಯ ಪಾತ್ರವನ್ನು ವಹಿಸುವುದು ವಿಶಿಷ್ಟವೂ, ಅಭಿಮಾನಾಸ್ಪದವೂ ಆಗಿದೆ.

ಹರಿಹರನ ಕೃತಿಗಳು ಲೌಕಿಕ ಸ್ತರವನ್ನು ಮೀರಿದುವು ಆತ್ಮೋದ್ಧಾರದ ದಾರಿಯಲ್ಲಿರುವವರೆಗೆ ದಾರಿ ದೀಪಗಳು ತೃಪ್ತಿಯ ಶಾಂತಿಗಾಗಿ ಬಾಳಿಗೆ ಸಾಧನಗಳು ವ್ಯಕ್ತಿ ಪ್ರಶಂಸೆಗಿಂತ ವ್ಯಕ್ತಿಯ ಬಾಳಿನ ಮೌಲ್ಯಗಳಿಗೆ ಬೆಲೆಯಿತ್ತುದರಿಂದಲೇ ಬೇಡರ ಕಣ್ಣಪ್ಪ ಮತ್ತು ಮಾದರ ಚೆನ್ನಯ್ಯ ಮುಂತಾದವರು ಮಹಾಶರಣರಾಗಿದ್ದಾರೆ. ಅವನ ಕೃತಿಗಳಲ್ಲಿ ಅವನು ಲೋಕಕ್ಕೆ ಅಂಜಿ ಸತ್ಯವನ್ನು ಮರೆಮಾಚದ ಕವಿ. ಇಲ್ಲಿಯ ಬಡಭಕ್ತರ ಚರಿತ್ರೆಗಳು ಈ ನಾಡಿನ ಬಡಜನತೆಯ ಬದುಕಿಗೆ ಸಂಜೀವಿನಿಗಳಾಗಿವೆ. ನಿರಂತರ ಆಶಾವಾದಿತ್ಯದ ಸಂಕೇತವಾಗಿದೆ.2

ಹರಿಹರ ಕವಿಗೆ ಶರಣರ ಚರಿತ್ರೆಗಳ ನಿರೂಪಣೆಗಾಗಿ ಭಾಷೆ ಬಡವಾದಂತೆ ಎನಿಸುತ್ತದೆ. ಮಾರ್ಗ ಶೈಲಿಯನ್ನು ಸಡಿಲಿಸಿ ತನ್ನ ಉದ್ದೇಶಕ್ಕನುಗುಣವಾಗಿ ಭಾಷೆಗೆ ದೇಶಿಯ ತಿರುವು ಕೊಟ್ಟು ಅರ್ಥವಾಗಬಲ್ಲ ಸರಳ ಭಾಷೆಯಲ್ಲಿ ಕಾವ್ಯ ಬರೆಯಲು ಮಾದರಿ ಹಾಕಿಕೊಟ್ಟ ಈ ಕವಿ ಪ್ರಥಮನೂ, ಆಗಿದ್ದಾನೆ. 12ನೇ ಶತಮಾನದ ಶಿವಶರಣರ ಕ್ರಾಂತಿ ಕರ್ನಾಟಕದ ಸಾಂಸ್ಕೃತಿಕ ಚರಿತ್ರೆಯಲ್ಲಿ ಒಂದು ಅಪೂರ್ವ ಘಟ್ಟ ವರ್ಣಾಶ್ರಮ ವ್ಯವಸ್ಥೆಯನ್ನು ಧಿಕ್ಕರಿಸುವ ಶಿವಶರಣರು ಜನಾಂಗದ ಬದುಕಿನಲ್ಲಿ ಅಮೂಲಾಗ್ರ ಪರಿವರ್ತನೆಗೆ ಕಂಕಣ ಕಟ್ಟಿಕೊಂಡರು.

This type of person is rarely portrayed in the literary world. This part of Basavanna's Deva Ragale, which depicts the layers of Basavanna's personality in a very subtle way, is a sign of the greatness of Harihara's poetic sense. The genius of Harihara Mahakavi, who used Bhakti as the source material of his poetry, was captivated by the description of the high life of Sarana, was rooted in this space and sprouted in the creation of a beautiful pure environment. Basavanna's great life has been vividly portrayed by using everything for the welfare of the world without wanting anything for himself.

Harihara; The poet has made his life worthwhile, the picture where he argued with the paravadis, the picture where he experienced Shiva with Sharangana, the picture of Sangameshwara's worship, the vision of Sangamesh in his dream, the free language, the harmonious and beautiful styles of the poetry have brought luster to the poetry.

This poet has published "Hariharatva" in his works. Enthusiasm of Bhakti Lordship over language Pride in Shivsharans Adhimana, Sharanas, Bhav, birth and death aside Show the supernatural beyond the mundane and make everything a ryavasana for Bhakti Making the skillful karmas as Bhakti yoga Seeing no fault in Shiva-Shiva devotees These are some of the special traces and qualities of this poet for the dissemination of Shiva Bhakti with the devotees. Fighting for truth, fighting for justice, protesting if it comes in the way of devotion to tradition, these are all the characteristics of his devotees. The service of devotees of Shiva's devotees is the path to God's realization, the character of his devotees is to condemn Hampe Tungabhadra as fraud, deceit, hypocrisy, and selfishness whenever there is an opportunity. In order to show how the Sharanas of his time fought for Shiva Bhakta and Shiv dharma, he gives priority to the sharp attitude of the Sharana personality in his works, protest against injustices, truths that never compromise with injustice.

Harihara Kavi's unique and immense contribution to Kannada literature is representative of the age by depicting all aspects of contemporary life in his works. From Vipra to Anthijana, from the laborer to the king, from the girl to the widow, everyone takes the place of protagonists in his works. It is unique and admirable that people who seem to be neglected by others play a central role here.

Harihar's works are beyond the worldly level, as long as they are on the path to self-realization, the path lights for the peace of contentment, the means of life, the praise of the individual, the values of the individual's life, Bedara Kannappa and Madara Chennaiah etc. are Mahasharana. In his works he is a poet who does not hide the truth from the world. The stories of the poor devotees here are a life story of the poor people of this country. A symbol of constant optimism.2

The Harihar poet feels that the language is too poor to narrate the stories of the Sharans. This poet is also the first who relaxed the Marga style and gave a native twist to the language according to his purpose and set a model for writing poetry in a simple language that can be understood. 12th Century Shiv Sharan Revolution An unprecedented moment in the cultural history of Karnataka, the Shiv Sharans who defied the varnashram system initiated a radical change in the life of the race.

ಹಂತ ಹಂತವಾಗಿ ಮಾನವ ಸಮುದಾಯದಲ್ಲಿ ತಲೆಯೆತ್ತಿದ್ದ ಕುಲ ಪಂಥಗಳ ಅಡ್ಡಗೋಡೆಗಳನ್ನು ನೆಲಸಮಗೊಳಿಸಿ ಸಮಾಜದ ಸಮಸ್ತರೂ ಕೃಷಿಕ, ಶ್ರಮಿಕ, ಕುಶಲ, ಕಲೆಗಾರ, ಬೋಧಕ ಗುರು ಶಿವಸ್ವರೂಪವೆಂದು ನೆರೆನಂಬಿದ ಶಿವಶರಣರಿಗೆ ಹೊಸ ಮಾನವ ಸಮಾಜ ನಿರ್ಮಾನ ಅಖಂಡ ಮಾನವ ಕಲ್ಯಾಣಗಳು ಪರಮ ಧ್ಯೇಯವಾದವು.

ಅಸಂಖ್ಯಾತ ಶರಣರ ಕ್ರಿಯಾತ್ಮಕ ನೆಲೆಗಟ್ಟಿನಮೇಲೆ ಬಸವಣ್ಣ ಹಮ್ಮಿಕೊಂಡ ಈ ಸಮಗ್ರ ಸ್ವರೂಪದ ಸಾಂಸ್ಕೃತಿಕ ಕ್ರಾಂತಿಯ ವಜ್ರದ ಉಂಡನೆ ನಿಜಭಕ್ತಿ ಈ ಭಕ್ತಿಯ ಒಂದು ಮಹತ್ವದ ಅಂಗ ಕಾಯಕತತ್ವ ಬೆವರು ಸುರಿಯಬೇಕು. ಸತ್ಯಶುದ್ಧ ಕಾಯಕ ಮಾಡಬೇಕು ನಮ್ಮ ಆಯ್ದು ಮೂಲ ಪರಿಶುದ್ಧ ಕಾಯಕವೇ ಆಗಿರಬೇಕು ವ್ಯಕ್ತಿಯ ಕ್ರಿಯಾಚರಣೆಯಲ್ಲಿ ಸತ್ಯ ಶುದ್ಧ ಕಾಯಕದ ನಿಷ್ಠೆ ಸ್ಫುಟಗೊಳ್ಳಬೇಕು. ಅಂಥ ವ್ಯಕ್ತಿಗಳ ವೃಂದ ಆರ್ಥಿಕ ದಾಸ್ಯದಿಂದ ಮುಕ್ತವಾಗಬಲ್ಲದು ಅಪರಿಗ್ರಯ ಮನೋಭಾವ ದಾಸೋಹದ ಚಿಂತನೆಯ ಉನ್ನತ ವಿಚಾರಶೀಲ ವ್ಯಕ್ತಿಗಳಿಂದಾಗಿ ಲೌಕಿಕ ಜೀವನದ ಬಗೆಗೆ ಇದ್ದಿರಬಹುದಾದ ಜಿಡ್ಡುಗಟ್ಟಿದ ಅಸಡ್ಡೆ ಅಥವಾ ಅನಾಸಕ್ತಿ ಅಳಿದು ದಿನನಿತ್ಯದ ವಾಸ್ತವ ಬದುಕನ್ನು ಸ್ವೀಕರಿಸುವ, ಎದುರಿಸುವ ಮತ್ತು ಗೌರವದಿಂದ ಕಾಣುವ ಧೋರಣೆಗಳು ಮೂಡಲು ಸಾಧ್ಯ. ಆಗ ಕಾಯಕತ್ವ ಸಮಾಜ ಜೀವಿಗಳ ವ್ಯಕ್ತಿತ್ವದ ನಿಕಷವಾಗುತ್ತದೆ. ಅದೊಂದು ವಿರಳ ವ್ಯಕ್ತಿತ್ವ ವಿಶಿಷ್ಟ ಸಮಾಜ. ವ್ಯಕ್ತಿಯ ಹಮ್ಮು ತಿಳಿದು, ಪರಸ್ಪರ ಪ್ರೀತಿ ವಿಶ್ವಾಸ ಬೆಳೆದು ಸತ್ಯಶುದ್ಧ ಮನೋಭಾವ, ಜೀವನನಿಷ್ಠೆ, ಜೀವದಯಾಪರತೆ, ಕರುಣೆ, ಅನುಕಂಪ, ಸಹಾನುಭೂತಿ ಬೆಳೆದು ಹೊಸದೊಂದು ವ್ಯಕ್ತಿತ್ವವೇ ಅವಿಷ್ಕಾರಗೊಳ್ಳುತ್ತದೆ. ಆ ವ್ಯಕ್ತಿತ್ವ ಪರಮನಾತ್ವಕತೆ, ಪರಮ ಸಾತ್ವಕತೆ ಸದಾಚಾರಗಳ ನೆಲೆ ಭಕ್ತಿಯ ತವನಿಧಿ.3

ಶರಣಕುಲ ಸರೋಜಕ್ಕೆ ಸೂರ್ಯನಂತಿದ್ದ ಬಸವಣ್ಣನ ವ್ಯಕ್ತಿತ್ವ ಇಂಥ ಅಪೂರ್ವ ಗುಣಗಳ ಗಣಿ. ಆದ್ದರಿಂದಲೇ ಆತ ಭಕ್ತಿ ಭಂಡಾರಿ ಅಂತರಂಗದ ಜ್ಞಾನ ಬಹಿರಂಗದ ಕ್ರಿಯೆಗಳ ಸಂಗಮವಾದ ಆತ, ಸರ್ವ ಜೀವಾತ್ಮರನ್ನು ದೇವರೆಂದು ನಂಬಿದ ಜಂಗಮ ಪ್ರೇಮಿ. ಸಕಲ ವಿಸ್ತಾರದ ರೂಹುಲಿಂಗವೆಂದು ಪರಿಗ್ರಹಿಸಿದ ಪರಮನಿಕ್ಷಯ ಲಿಂಗವ್ಯಸನಿ, ಕಾಯಕ ತತ್ವದ ಆಚರಣೆಲ್ಲಿ ತನ್ನತನವನ್ನು ಸಮರ್ಪಿಸಿಕೊಂಡ ದಿವ್ಯ ಅನುಭಾವಿ, ಶಿವರಶರಣರ ಮೇಲೆ ನಿಷ್ಠೆ ಸದಾಚಾರಗಳ ಬೆಂಬಲದಿಂದ ಸಂಘಟಿತವಾದ ಸಾಂಸ್ಕೃತಿಕ ಕ್ರಾಂತಿಯ ಮಂಚೂಣಿಯಲ್ಲಿ ನಿಂತ ಬಸವಣ್ಣನ ವ್ಯಕ್ತಿತ್ವ ತನ್ನ ಸಮಕಾಲೀನ ಶರಣರು ಮತ್ತು ಕವಿಗಳ ಮೇಲೆ ಗಾಢವಾದ ಪ್ರಭಾವ ಬೀರಿತು. ಚಿರಂತನ ಮುದ್ರೆಯೊತ್ತಿತು ಬಸವಣ್ಣನ ಪ್ರಭಾವಕ್ಕೆ ಒಳಗಾದ ಅನೇಕ ಕವಿಗಳು ಆತನನ್ನು ಕುರಿತು ಕಾವ್ಯಗಳನ್ನು ರಚಿಸಿ ತಮ್ಮ ಪ್ರತಿಭೆಯನ್ನು ಬೆಳಗಿಸಿಕೊಂಡರು.

ಉಜ್ವಲ ಜ್ಞಾನಿ ಮತ್ತು ಭಕ್ತನಾದ ಬಸವಣ್ಣನ ಜೀವನ ಚರಿತ್ರೆಯನ್ನು ರೂಪಿಸಿಕೊಳ್ಳುವುದು ಅಷ್ಟೊಂದು ಸುಲಭದ ಮಾತಲ್ಲ. ಆತನ ಮತ್ತು ಆತನ ಸಮಕಾಲೀನ ಶರಣರ ವಚನಗಳಲ್ಲಿ ಅಡಕಗೊಂಡಿರುವ ಕೆಲವು ಸಾಂದರ್ಭಿಕ ವಿಷಯಗಳು ಎರಡು; ಬಸವರಾಜ ದೇವರ ರಗಳೆ, ಸಿಂಗಿರಾಜ ಪುರಾಣ, ಬಸವಪುರಾಣ ಮುಂತಾದ ಕಾವ್ಯಗಳಲ್ಲಿ ನಿರೂಪಿತವಾದ ಕೆಲವು ಧಾರ್ಮಿಕ, ಸಾಮಾಜಿಕ, ರಾಜಕೀಯ ಅಂಶಗಳು ಪವಾಡಗಳಲ್ಲಿ ಹುದುಗಿರುವ ಅಂಶಗಳು (ಘಟನೆಗಳು) ಮೂರು; ಶಾಸನೋಕ್ತ ಸಂಗತಿಗಳು.

ಈ ಎಲ್ಲ ಮೂಲಗಳಿಂದ ಬಸವಣ್ಣನ ಜೀವನದ ಸ್ಥೂಲ ಚಿತ್ರವನ್ನು ಸಂಯೋಜಿಸಬಹುದಾಗಿದೆ. ಪ್ರಸ್ತುತ ಹರಿಹರ ಕವಿಯ "ಬಸವರಾಜದೇವರ ರಗಳೆ" ಕನ್ನಡ ಸಾಹಿತ್ಯದಲ್ಲಿ ಬಸವಣ್ಣನವರನ್ನು ಕುರಿತು ಕಾವ್ಯರೂಪದ ಪ್ರಥಮ ದಾಖಲೆ. "ಸತ್ತು ಹುಟ್ಟುವ ಹುಟ್ಟಿ ಸಾಯುವ ಮಾನವರ ಮೇಲೆ ಕಾವ್ಯ ಬರೆಯುವುದೇ ಮನುಜರ ಮೇಲೆ, ಸಾವವರ ಮೇಲೆ ಕನಿಷ್ಠರ ಮೇಲೆ ಕಾವ್ಯಮಂ ತನತಗಿಂದ್ರಚಂದ್ರ ಕವಿಕರ್ಣದಧೀಚಿ ಬಲೀಂದ್ರರೆಂದು ನೀಂ ಅನವರತಂ ಪೊಗಳ್ದು ಕೆಡಬೇಡಲೇ ಮಾನವ ನೀನರ್ಹನಿಶಂ ನೆನೆ ಪೊಗಳೆರ್ಚಿಸೆಮ್ಮ ಕಡುಸೊಂಪಿನ ಪೆಂಪಿನ ಹಂಪೆಯಾಳ್ವನಂ" ಎನ್ನುವ ಜೀವನ ದೃಷ್ಟಿ ಕಾವ್ಯ ಧೋರಣೆಯುಳ್ಳ ಮಹಾಕವಿ ಬಸವಣ್ಣನನ್ನು ತನ್ನ ಕಾವ್ಯಕ್ಕೆ ವಸ್ತುವಾಗಿ ಆಯ್ದುಕೊಂಡಿದ್ದು ಬಸವಣ್ಣನ ವ್ಯಕ್ತಿತ್ವದ  ಹಿರಿಮೆಗೆ ಸಾಕ್ಷಿ.

ಭಕ್ತಿಯೆಂಬುದು ಮಾಡಬಾರದು ಬರುತ್ತ ಕೊಯ್‌ವುದು ಹೋಗುತ್ತ ಕೊಯ್‌ವುದು ಗರಗಸದಂತೆ ಎಂದು ಬಸವಣ್ಣ ಮೆಲ್ಲಮೆಲ್ಲನೆ ಭಕ್ತನಪ್ಪ ಎನ್ನುವ ವಿನಯದಿಂದ ಮುನ್ನಡಿಯಿಟ್ಟ ಬಸವಣ್ಣನ ದೃಷ್ಟಿಯಲ್ಲಿ ಭಕ್ತಿ ಎನ್ನುವುದು ಬಾಹ್ಯಾಚರಣೆಗಳ ಕರ್ಮಾಂತನದ ಕುಹುಹಲ್ಲ ಅಂತರಂಗ ಶುದ್ಧಿಯ ಒರೆಗಲ್ಲು ನಡೆನುಡಿಗಳ ಶುದ್ಧೀಕರಣಕ್ಕೆ ಸಾಧನವಾಗಬಲ್ಲ ಸದಾ ಎಚ್ಚರವಿಡಿದ ದೈವೀ ಪ್ರಜ್ಞೆಯಿಂದ ಕೂಡಿದ ಮನೋನಿಷ್ಠೆಯಿಂದ ಹೊಮ್ಮುವ ಆಚರಣೆ. ಆದ್ದರಿಂದ ಇಲ್ಲಿ ಬಾಹ್ಯ ಪೂಜೆಗಿಂತ ಅಂತರಂಗ ಪ್ರಜ್ಞೆಯಲ್ಲಿ ಸ್ಫುರಿಸುವ ಶಿವಭಾವದಿಂದ

Step by step, building a new human society and building intact human welfare became the supreme mission of Shivsharans, who believed that Guru Shivswarup is the personification of the cultivator, hard worker, craftsman, artist, and teacher of the society, by leveling the cross walls of clan sects that were rising in the human community step by step. True devotion is the diamond round of this comprehensive form of cultural revolution that Basavanna embarked upon on the dynamic foundation of innumerable martyrs. the loyalty of Satya Shuddha Kayaka should be reflected in the actions of the person. A group of such persons can be freed from economic slavery. Due to the highly reflective persons of unsparing spirit, Dasoha's thinking, the stubborn indifference or disinterest towards worldly life can disappear and the attitudes of accepting, facing and respecting the daily reality can arise. Then Kayaktva becomes the criterion of personality of social beings. It is a society characterized by rare personalities. By knowing the purpose of a person, mutual love and trust grows, truthfulness, faithfulness to life, kindness to life, mercy, compassion, sympathy grows and a new personality is discovered. the foundation of righteousness, the source of devotion.3 Basavanna's personality, which was like the sun to Sharankula Saroj, is a mine of such extraordinary qualities. That is why he is the confluence of acts of knowledge and revelation of Bhakti Bhandari AntarAga, a lover of movement who believed all living beings to be God. The personality of Basavanna, who was a paramanikshaya lingavasani who understood the wide range of ruhulingave, a divine practitioner who dedicated himself in the practice of Kayaka philosophy, who stood at the forefront of an organized cultural revolution with the support of loyalty and righteousness to Shivarasarans, had a profound impact on his contemporary sarans and poets. Many poets who came under the influence of Basavanna with the imprint of Chiranta wrote poems about him and showed their talent. It is not so easy to create the life history of Basavanna, a brilliant scholar and devotee. Some of the occasional themes contained in his and his contemporaries' verses are two; Some of the religious, social, and political aspects presented in the poems like Basavaraja Deva Ragale, Singiraja Purana, Basavapurana etc. are three elements (incidents) embedded in miracles; Statutory facts.

From all these sources a broad picture of Basavanna's life can be pieced together. Presently Harihara Kavi's "Basavarajdevara Ragale" is the first record of poetry about Basavanna in Kannada literature. "Poetry is about human beings who are born and die and who die. The great poet Basavanna, who has a poetic attitude, has chosen Basavanna as the subject of his poetry witness

Bhakti should not be done like a saw which comes and reaps and reaps and goes. Basavanna slowly advanced as Bhaktanappa, in the view of Basavanna, Bhakti is a ritual that is filled with devotion and is filled with an ever-awake divine consciousness that can be a means to purify the actions of a clean sand stone. Therefore, here, rather than external worship, the words and actions that are played with the spirit of Shiva, which is inspired in the inner consciousness, are discovered in all aspects of life. Step by step, we have to go through the path of great pain, which we have to go through in conflict with our selfishness. This concept of Bhakti, the embodiment of Basavanna's personality, is the most attractive and influential aspect of Harihara, as it is a kind of

ಆಡುವ ನುಡಿ, ನಡೆ ಹೀಗೆ ಅದು ಬದುಕಿನೆಲ್ಲ ಮುಖಗಳಲ್ಲಿಯೂ ಅವಿಷ್ಕಾರಗೊಳ್ಳುವಂಥದು[4] ಹೆಜ್ಜೆ ಹೆಜ್ಜೆಗೆ ಜೀವನದಲ್ಲಿ ಹಮ್ಮು ಸ್ವಾರ್ಥಗಳ ಜೊತೆಗೆ ಸಂಘರ್ಷ ಮಾಡುತ್ತಲೇ ಹೋಗಬೇಕಾದ ಅಪಾರ ನೋವಿನ ಹಾದಿ ಭಕ್ತಪಥ. ಇದೊಂದು ರೀತಿಯ ಅಸಾಧಾರಣತೆ ಆದುದರಿಂದ ಬದುಕಿನ ಶುದ್ಧೀಕರಣಕ್ಕೆ ಸಾಧನ ಭಕ್ತಿ ಅದು ಕ್ಲಿಷ್ಟಕರವಾದರೂ ಇಷ್ಟದಾಯಕ ಬಸವಣ್ಣನ ವ್ಯಕ್ತಿತ್ವದ ಸಾರಸ್ವರೂಪವಾದ ಭಕ್ತಿಯ ಈ ಪರಿಕಲ್ಪನೆಯೇ ಹರಿಹರನಿಗೆ ಅತ್ಯಂತ ಆಕರ್ಷಕ ಮತ್ತು ಪ್ರಭಾವಶಾಲಿಯಾದ ಅಂಶ. ಬಸವಣ್ಣನನ್ನು ಅಡಿಗಡಿಗೆ ಮನದುಂಬಿ ಬಣ್ಣಿಸುವ ಹರಿಹರ, ಆತನ ಅಂತರಂಗದ ಪದರು ಪದರುಗಳನ್ನು ಬಿಡಿಸುತ್ತ ಭಕ್ತಿಯ ನರುಗಂಪು ಕಾವ್ಯದ ತುಂಬ ಸೂಸುವಂತೆ ನಿರೂಪಿಸುತ್ತಾನೆ.

ಹರಿಹರನ ಈ ಕಾವ್ಯವನ್ನು ಓದುತ್ತ ಹೋದಂತೆ ಬಸವಣ್ಣನ ಭಕ್ತಿಯ ಮನೋಭಾವ ಹರಿಹರನ ಭಕ್ತಿಭಾವ ಪರವಶತೆ ಪರಸ್ಪರ ಎರಕಗೊಂಡ ಅನುಭವವಾಗುತ್ತದೆ. ಬಸವಣ್ಣನ' ನಿರ್ಮಲ ರೂಪು ಭಕ್ತಿ ಧವಳಿತ ಚೇಲವು ಸದಾಚಾರದ ಸೊಗಸು ಕಣ್ಮುಂದೆ ಕಟ್ಟುತ್ತದೆ. ಹೃದಯವನ್ನು ಸ್ಪರ್ಶಿಸುತ್ತವೆ. 13ನೇ ಶತಮಾನದ ಆದಿಭಾಗದವರೆಗೂ ಇದ್ದ ಈತ ಬಸವಣ್ಣನನ್ನು ಕಂಡಿದ್ದರೂ ಕಂಡಿದ್ದಾನು ಆದರೆ ಕಲ್ಯಾಣ ಕ್ರಾಂತಿಯ ಪೂರ್ವದ ಬಸವಣ್ಣನ ಜೀವನಕ್ಕೆ ಸಂಬಂಧಿಸಿದ ಅನೇಕ ವಿಷಯಗಳನ್ನು ತಾನು ಅತಿ ನಿಕಟವರ್ತಿಗಳಿಂದ ಕೇಳಿ ತಿಳಿದಿರುವುದೂ ಸಾಧ್ಯ ತುಂಬ ಕಾಳಜಿಯಿಂದ ಆತ್ಮೀಯತೆಯಿಂದ ವಿವರಿಸುತ್ತಾನೆ.

**3. ಉಪಸಂಹಾರ:**

"ಭಕ್ತನ ಮನೋಭಾವದ ಸೂಕ್ಷ್ಮತೆಯನ್ನು ಕಳವಳವನ್ನೂ ವಿಸ್ಮಯ ಅಮಾಯಿಕ ಸ್ವಭಾವಗಳನ್ನು ಅತ್ಯಂತ ತಾದಾತ್ಮ್ಯದಿಂದ ಬಿಡಿಸುತ್ತಾನೆ. ಕೇವಲ 13 ಸ್ಥಲಗಳು ಮಾತ್ರ ಲಭ್ಯವಿರುವ ಈ ಕಾವ್ಯ ಬಸವಣ್ಣನ ಜೀವನ ಶುದ್ಧಿಸಾಧನೆಯ ಪೂರ್ವರಾಗವಾಗಿ ತೋರುತ್ತದೆ. ನಮಗೆ ಉಪಲಬ್ಧವಿಲ್ಲದ ಇನ್ನುಳಿದ 12 ಸ್ಥಲಗಳಲ್ಲಿ ಶಿವಶರಣರ ಕ್ರಾಂತಿಯ ಮೂಲ ಸ್ವರೂಪ ವರ್ಣಾಶ್ರಮ ಸಂತರ ಕಾಯಕ ತತ್ವದ ಆಚರಣೆ ಸಮಾಜದ ಸಕಲ ಜೀವಿಗಳ ಲೇಸನೆ ಬಯಸಿದ ನೂತನ ಮಾನವ ಜನಾಂಗದ ಕನಸು, ನನಸು, ಹೋರಾಟ ಸಂಘರ್ಷಗಳ ಅಪೂರ್ವ ಚಿತ್ರಣಗಳು ಅಲ್ಲಿ ಅವಶ್ಯವಾಗಿ ಉಲ್ಲೇಖಿತವಾಗಿರಬೇಕು. ಬಸವಣ್ಣನವರ ಧೈರ್ಯ ಸಾಧನೆಯ ಮತ್ತು ಶಿವಶರಣರು ಹಮ್ಮಿಕೊಂಡ ಹೊಸ ಮಾನವ ಸಮಾಜ ನಿರ್ಮಾಣಕ್ಕೆ ಪ್ರೇರಕವಾದ ಘಟನೆಗಳನ್ನು ಒಳಗೊಂಡಿರಬಹುದಾದ ಆ ಕಾವ್ಯಭಾಗ ಇದುವರೆಗೂ ಲಭ್ಯವಾಗದಿರುವದು ದುರ್ದೈವದ ಸಂಗತಿ. ಕಾಲಗರ್ಭದಿಂದ ಎಂದಾದರೂ ಒಮ್ಮೆ ಹೊರಚಿಮ್ಮಿದರೆ ಆಗ ಬಸವ ಜೀವನದ ದಿಗಂತದಲ್ಲಿ ಹೊಸ ಬೆಳಕು ಚೆಲ್ಲೀತು.4

**ಪರಾಮರ್ಶನ ಗ್ರಂಥಗಳು:**


೧. ಕನ್ನಡ ಸಾಹಿತ್ಯ ಚರಿತ್ರೆ – ರಂ. ಶ್ರೀ. ಮುಗಳಿ

೨. ಸಾಮಾನ್ಯರಿಗೆ ಸಾಹಿತ್ಯ ಚರಿತ್ರೆ – ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

೩. ಹರಿಹರ ದರ್ಶನ – ಪ್ರೊ. ಕೀರ್ತಿನಾಥ ಕುರ್ತಕೋಟಿ

೪. ಪುರಾತನು' ರಗಳೆಗಳು – ಸಂ. ಡಾ. ಆರ್. ಸಿ. ಹಿರೇಮಠ ಮತ್ತು ಎಮ್. ಎಮ್. ಕಲಬುರ್ಗಿ


exceptionalism, therefore a tool for the purification of life. Harihara, who paints Basavanna down to earth, unfolds the layers of his antaraga and renders his devotional narrative full of poetry.

While reading this poem of Harihara, Basavanna's devotional spirit and Harihara's devotional ecstasy are felt. Basavanna's unblemished form of Bhakti Dhavalitha chela brings the beauty of righteousness before the eyes. Touch the heart. He was there until the beginning of the 13th century, although he had seen Basavanna, but he also heard many things related to Basavanna's life before the Kalyana revolution, and he explained it with great care and intimacy.

**3. Conclusion**

He removes the subtleties of the devotee's mind from anxiety and awe and innocent natures with the utmost perfection. Only 13 sthalas are available in this poem, Basavanna's life seems to be a prelude to Shuddhisadhana. In the other 12 places that are not available to us, the original form of Shiv Sharan's revolution, the practice of Kayaka philosophy of Varnashram saints, the dream, hopes, and struggles of the new human race, which wants the welfare of all the creatures of the society, must be mentioned there.

It is an unfortunate fact that the poem, which may contain the incidents of Basavanna's bravery and the events leading to the construction of a new human society undertaken by Shiv Sharan, has not been made available till now. Once the snail emerges from the womb, a new light shines on the horizon of life.4

**Reference Books**


1. Kannada Literary History - Ram. Mr. a girl
2. Literary History for the General - Bangalore University, Bangalore
3. Harihar Darshan - Prof. Kirtinath Kurtakoti
4. Ancient Battles - Vol. Dr. R. C. Hiremath and M. M. Kalaburgi